ಪುಟ ಬಂಗಾರ

# ಏನೋ ಮತ್ತು ಏನ್ ಸ್ವಾಮಿ



**ಸಿದ್ಧಲಿಂಗಯ್ಯ**

ದೇವರುಗಳು ಸ್ವತಂತ್ರವಲ್ಲ. ಅವುಗಳು ಸಮಾಜದಲ್ಲಿರುವ ಅನೇಕ ನಿಯಂತ್ರಕ ಶಕ್ತಿಗಳಿಗೆ ಒಳಗಾಗಿವೆ. ಬಡವ, ಶ್ರೀಮಂತ ಎಂಬ ಭಾವನೆ ದೇವರುಗಳನ್ನು ಬಿಟ್ಟಿಲ್ಲ. ದೇವರು ಮೈಮೇಲೆ ಬಂದಾಗ ಕಷ್ಟ ತೋಡಿಕೊಳ್ಳಲು ಎಲ್ಲ ರೀತಿಯ ಜನರೂ ಬರುತ್ತಾರೆ. ಆದರೆ ದೇವರು ಎಲ್ಲರನ್ನೂ ಒಂದೇ ರೀತಿಯಾಗಿ ಮಾತನಾಡಿಸುವುದಿಲ್ಲ. ಚಡ್ಡಿ ಇಕ್ಕಿಕೊಂಡು ಬಂದಿರುವ ಬಡ ಭಕ್ತರನ್ನ 'ಏನ್ ಮಗನೇ' ಎಂದು ಕರೆಯುತ್ತವೆ. ಕಚ್ಚೆ, ಕೋಟು, ಸೂಟು ಹಾಕಿಕೊಂಡು ಬಂದವರನ್ನು 'ಏನ್ ಸ್ವಾಮಿ ನಿಮ್ಮ ಕಷ್ಟ' ಎಂದು ಕೇಳುತ್ತವೆ. ದಲಿತ ಹೆಣ್ಣುಮಕ್ಕಳನ್ನು ದೇವರುಗಳು 'ಏನೇ' ಅಥವಾ '... ಏನ್ ಮಗಳೇ' ಎಂದು ಕರೆಯುತ್ತವೆ. ಒಳ್ಳೆಯ ಸೀರೆ ಉಟ್ಟು ವಡವೆಗಳನ್ನು ಯಥೇಚ್ಛವಾಗಿ ಧರಿಸಿಕೊಂಡು ಬರುವ ಭಕ್ತರನ್ನು 'ಏನ್ರೀ' ಅಂತಲೋ ಅಥವಾ 'ಏನಮ್ಮಣ್ಣೀ' ಎಂತಲೋ ಸಂಬೋಧಿಸುತ್ತವೆ. ಬಡವ ಶ್ರೀಮಂತರ ಬಗ್ಗೆ ಇದೇ ರೀತಿಯ ನಡವಳಿಕೆಯನ್ನು ನೀವು ಪೊಲೀಸ್ ಸ್ಟೇಷನ್‌ಗಳಲ್ಲೂ ಕಾಣಬಹುದು. ನಮ್ಮ ದೇವರುಗಳಿಗೂ ಪೊಲೀಸರಿಗೂ ಏನ್ ವ್ಯತ್ಯಾಸ?

ಮೈಮೇಲೆ ಬರುವ ದೇವತೆಗಳನ್ನು ಹಳ್ಳಿಗಾಡಿನ ಜನ ಬಹಳ ನಂಬುತ್ತಾರೆ. ಭಕ್ತರ ಮನಸ್ಸಿನಲ್ಲಿರುವುದನ್ನು ದೇವರು ಹೇಳುತ್ತದೆ. ಆದ್ದರಿಂದ ನಾವು ನಂಬುತ್ತೇವೆ ಎಂದು ಜನರ ವಾದ. ಏನನ್ನು ಕಂಡುಕೊಂಡಿರುತ್ತಾರೋ ಅದನ್ನು ಈ ದೇವರು ಹೇಳುತ್ತವಂತೆ. ದೇವರು ಸರ್ವಜ್ಞ, ಸರ್ವಶಕ್ತ. ಆದ್ದರಿಂದಲೇ ದೇವರಿಗೆ ಇದು ಸಾಧ್ಯ ಎಂದು ಅವರ ನಂಬಿಕೆ. ಮೈಮೇಲೆ ಬರುವ ದೇವತೆಗಳು ಕಳುವಾದ ವಸ್ತುಗಳು ಎಲ್ಲಿವೆ ಎಂಬುದನ್ನು ಮತ್ತು ತಮ್ಮ ಹೆಸರು ಏನು ಎಂಬುದನ್ನು ಹೇಳುತ್ತವೆ ಎನ್ನುತ್ತಾರೆ. ಇದರಿಂದ ಶನಿ, ಮುನೇಶ್ವರ, ವೆಂಕಟರಮಣ ಇತ್ಯಾದಿ ದೇವತೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಈ ಸಂಗತಿಗಳನ್ನು ಪರೀಕ್ಷೆ ಮಾಡದೆ ಹೇಗೆ ನಂಬುವುದು?

ಆದ್ದರಿಂದ ಮೈತುಂಬಿ ಕೂಗಾಡುವ ಈ ದೇವರುಗಳಿಗೆ ಕೆಲವು ಒಳ್ಳೆಯ ಪ್ರಶ್ನೆಗಳನ್ನು ಕೇಳಬೇಕು. ಸರ್ವವನ್ನು ಬಲ್ಲ ದೇವರು ಆ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ದೇವರು ಬರುವ ವ್ಯಕ್ತಿ ಅವಿದ್ಯಾವಂತನಾಗಿದ್ದರೆ (ಎ+ಬಿ)2 ಏನು ಎಂಬ ಪ್ರಶ್ನೆ ಹಾಕಿದರೆ ಅವನು ನಿಜವಾಗಲೂ ನಿರುತ್ತರನಾಗುವನು. ಹಿಟ್ಲರನ ಹುಟ್ಟಿದ ದಿನಾಂಕ, ಹಿರೋಷಿಮಾ, ನಾಗಸಾಕಿಯ ಮೇಲೆ ಬಾಂಬು ಹಾಕಿದ ಪೈಲೆಟಿನ ಹೆಸರು? ಇವುಗಳನ್ನು ಈ ದೇವರು ಹೇಗೆ ಹೇಳಲು ಸಾಧ್ಯ? ಜ್ಯಾಮಿಟ್ರಿ ಮತ್ತು ಫಿಸಿಕ್ಸ್, ಕೆಮಿಸ್ಟ್ರಿಯ ಕೆಲವು ಕಠಿಣ ಪ್ರಶ್ನೆಗಳಂತೂ ಎಂಥ ದೇವರನ್ನೂ ಮನುಷ್ಯನನ್ನಾಗಿ ಮಾಡಿಬಿಡುತ್ತವೆ.